Regn No BC 155

Sri "SATYAVADI"
— DAILY —
MYSORE 4
46 th Year

Protect the cow

— ೫೮ —

ಸತ್ಯವಾದಿ
SATYAVADI

7-5-1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸಾ೦ಪಕರು– ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ,

ಗೋಸಂರಕ್ಷಣೆ ಮಾಡಿ

ಕಾಶ್ಮೀರದ ಬಗೆ ಚರ್ಚೆ ನಡೆಯಲಾರದು

ಮುಂದಾಗಿ ತಿಳಿಯಲಾಗದ ಪರಿಸ್ಥಿತಿಯು ಏನಾ, ಕಾಶ್ಮೀರ ಬಗ್ಗೆ ಭದ್ರತಾ ಸಮಿತಿ ಮತ್ತೆ ಸೇರಲು ಗಮನ ಕೊಡುವುದಿಲ್ಲ ಎಂದು ನ್ಯೂಯಾರ್ಕ್ ಟೈಂಸ್ ತಿಳಿಸಿದೆ.

ಆಶಾವಾದಿ

ಭಾರತದ ಅಧ್ಯಕ್ಷಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿಯಾಗಿರುವ ಬಾಲ್ಲದಲ್ಲಿ ಹೆಂಡವನ್ನು ಇಳಿಸುವವರಾಗಿದ್ದ 48 ವರ್ಷದ ಶ್ರೀ ಜಾವಮುನಾ ಪ್ರಸಾದ ತ್ರಿಶೂಲ ನಿಷ್ಠೆ ಅಧ್ಯಕ್ಷ ಸ್ಥಾನಕ್ಕೆ ಓಟು ಕೇಳಲು ಲಕ್ನೋವಿಗೆ ಆಗಮಿಸಿದರು. ಹಿಂದು ಳಿದವರು ಮತ್ತು ನಿಮ್ನ ವರ್ಗದವರು ತಮಗೆ ಮತ ಕೊಡುವರೆಂದ, ಅತ್ಯಧಿಕ ಬಹುಮತದಿಂದ ತಾವು ಜಯಶಾಲಿ ಆಗುವುದಾಗಿಯೂ ಅವರು ತಿಳಿಸಿದರು

ಅಧಿಕಾರ ಹೆಚ್ಚಬೇಕು

ತಮಿಳುನಾಡು ಪ್ರದೇಶ ಕಾಂಗ್ರೆಸು ಸಮಿತಿ ಸಭೆಯನ್ನುದ್ದೇಶಿಸಿ ಭಾರತದ ಮಾಜಿ ಹಣಕಾಸಿನ ಮಂತ್ರಿ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ಮದ್ರಾಸಿನಲ್ಲಿ ಭಾಷಣಮಾಡುತ್ತಾ, ದಕ್ಷಿಣ ಪ್ರತ್ಯೇಕ ರಾಗಬೇಕೆಂಬ ಡಿಎಂಕೆ ಬೇಡಿಕೆಯನ್ನು ವಿರೋಧಿಸಿ, ರಾಜ್ಯಗಳಿಗೆ ಹೆಚ್ಚು ಅಧಿಕಾರ ಕೊಡುವಂತೆ ಘಟನೆ ತಿದ್ದುಪಡಿ ಆಗಬೇಕೆಂದು ತಿಳಿಸಿದರು ಪ್ರತ್ಯೇಕ ನಾಡು ಬೇಡಿಕೆಯು ವಿರುದ್ಧ ಕಾಂಗ್ರೆಸಿಗರು ಸಂಯುಕ್ತರಂಗ ರಚಿಸಬೇಕೆಂದರು.

ಕಡ್ಡಾಯ ಕೂಡದು

ಮದ್ರಾಸಿನ ಹಿಂದಿ ಪ್ರಚಾರಕ ಸಂಘದಲ್ಲಿ ನಿನ್ನೆ ಮದ್ರಾಸಿನ ಶಿಕ್ಷಣ ಮಂತ್ರಿ ಶ್ರೀ ಎಂ ಭಕ್ತವತ್ಸಲಂ ಮಾತನಾಡುತ್ತ ಕಡ್ಡಾಯ ಹಿಂದಿ ಶಿಕ್ಷಣಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದರು

ಸಂಘಟನಾ ಸಮಿತಿ ಸಭೆ

ನವ ದೆಹಲಿಯಲ್ಲಿ ಮುಂದಿನ ತಿಂಗಳು 2 ಮತ್ತು 3 ನೆಯ ತಾ|| ಸಮಾವೇಶವಾಗುವ ರಾಷ್ಟ್ರೀಯ ಸಂಘಟನಾ ಸಮಿತಿ ಜುನಾವಣೆ ಕಾಲದಲ್ಲಿ ಕೆಲವು ರಾಜಕೀಯ ಪಕ್ಷಗಳು ಕೋಮು, ಜಾತಿ ಹಾಗೂ ಧಾರ್ಮಿಕ ಮನಸಿಗಳನ್ನು ಮಾಡಿಕೊಂಡ ಬಗ್ಗೆ ಮತ್ತು ಜನತೆಯ ಮೇಲೆ ಅದಂ ಪರಿಣಾಮವನ್ನು ಕುರಿತು ಚರ್ಚಿಸುವದು. ಪ್ರತ್ಯೇಕತೆಗಾಗಿ ದ್ರಾವಿಡ ಮುನ್ನೇತ್ರ ಕಳಗಂ ಚಳವಳಿ ಮಾಡುವುದೆಂದು ಶ್ರೀ ಸಿ ಎನ್ ಅಣ್ಣಾದೊರೈ ಹೇಳಿರುವ ಹಿನ್ನಲೆಯಲ್ಲಿ ಈ ಸಮಿತಿ ಸೇರುವದು.

ಸಿಡಿಲು ಬಡಿದು ಮರಣ

ಮುರ್ಷಿದಾಬಾದು ಜಿಲ್ಲೆಯ ಬೇರಾಂವುಂ ಬಳಿಯ ಒಂದು ಗ್ರಾಮದಲ್ಲಿ ಗುರುವಾರ ಸೀಸ್ತಾನ್ ಆಫ್ ಇಂಡಿಯ ಚಿತ್ರ ತೆಗೆಯುತ್ತಿದ್ದಾಗ ಮಧ್ಯಾಹ್ನದ ವೇಳೆ ಶ್ರೀ ಬಾಲು ದಾಸಗುಪ್ತರಿಗೆ ಸಿಡಿಲು ಬಡಿಯುತೆಂದು ಕಲ್ಕತ್ತಾ ವಾರ್ತೆ. ಮಳೆಯ ಚಿತ್ರ ತೊಟ್ಟೊಗೊಲ್ಲಿಜಯ ಚಿತ್ರಕ್ಕಾಗಿ ಅವರಿಗೆ 1961 ರಲ್ಲಿ ಅವರಿಗೆ ಭಂಗಾಂದ ಪದಕ ಬಹುಮಾನ ದೊರೆತ್ತಿತ್ತು.

5 ಸಾವಿರ ಮಂದಿಯ ಮರಣ

ಸ್ವೀಡನ್, ಡೆನ್ಮಾರ್ಕ್ ಮತ್ತು ಸ್ವಿಟ್ಸರ್ಲಂಡಿನಂಥಹ ಶ್ರೀಮಂತ ರಾಷ್ಟ್ರಗಳಲ್ಲಿ ಆತ್ಮಹತ್ಯೆ ಹೆಚ್ಚಾಗಿರುವುದು. ಬಡರಾಷ್ಟ್ರ ಸ್ಪೇನ್ ವತ್ತು ಪೋರ್ಚುಗಲ್‌ನಲ್ಲಿ ಕಡಿಮೆ ಇಂಗ್ಲೆಂಡಿನಲ್ಲಿ ವರ್ಷಕ್ಕೆ 5 ಸಾವಿರ ಜನ ಆತ್ಮಹತ್ಯೆಮಾಡಿಕೊಳ್ಳುವರು

ಸಾಲ್ಜಾರ್ ವಿರುದ್ಧ ದಂಗೆ

34 ವರ್ಷಗಳ ಹಿಂದಿನಿಂದಲೂ ಸಡಿಮುತ್ತಿರುವ ಸಾಲಜಾರ ಆಡಳಿತದ ವಿರುದ್ಧ ಪೋರ್ಚುಗಲ್ ಅದ್ಯಂತ ಆಯುಧದಿಂದ ಕೂಡಿದ ದಂಗೆ ಕಡೆಯಲು ಸಬಮೆಷಿನ್ ಬಂದೂಕಗಳನ್ನು ಹೊತ್ತಿರುವ ಪೋಲೀಸರು ಪೋರ್ಚುಗಲ್ ಅದ್ಯಂತ ಎಚ್ಚರವಾಗಿರುವದಾಗಿ ಲಂಡನ್ ವಾರ್ತೆ. ಸಾಲಜಾರರ ಆರವ ನೆಯಲ್ಲಿ ದಂಗೆ ಆಗುವ ಸಂಭವವಿದೆ

ಬಂಧನ

ಕಳೆದ ತುಕ್ರವಾರ ಬೆಳಿಗ್ಗೆ, ಹುಡುಗಿಯು ಮದುವೆಯು ಹಿಂದಿನ ದಿನ 14 ವಯಸ್ಸಿನ ಸೀತಾ ಎಂಬ ಹುಡುಗಿಯನ್ನು ಚಿಕ್ಕಮಗಳೂರಿನ ಶಾಂತವೇರಿ ಎಸ್ಟೇಟಿನ ಜೋಸೆಫ್ ಎಂಬ ಉದ್ಯೋಗಿ ಅಪಹರಿಸಿದ ಸಂದರ್ಭದಲ್ಲಿ ಬಂಧಿತನಾದನು ಅವಳ ತಂದೆ ಎಸ್ಟೇಟಿನ ಮತ್ತೊಬ್ಬ ಉದ್ಯೋಗಿ ಪೀಕ್ಯನಾಯಕ ಪೋಲೀಸರಿಗೆ ದೂರುಕೊಟ್ಟಿದ್ದನು

ಪೂರ್ಣ ತಿರಸ್ಕೃತವಾಗಿಲ್ಲ

ಮಧುರೆಯಲ್ಲಿ ನಿನ್ನೆ ಡಿಎಂಕೆ ಕಾರ್ಯಕರ್ತರು ಮತ್ತು ಸಹಾನುಭೂತಿಗಾರರ ಸಭೆಯಲ್ಲಿ ಡಿಎಂಕೆ ನಾಯಕ ಶ್ರೀ ಸಿ ಎನ್. ಅಣ್ಣಾದೊರೈರವರು ಮಾತನಾಡುತ್ತಾ, ದ್ರಾವಿಡನಾಡಿನ ಒಗ್ಗೆ ರಾಜ್ಯ ಸಭೆಯಲ್ಲಿ ಪ್ರಧಾನಿ ನೆಹರು ಮಾಡಿರುವ ಟೀಕೆಗಳಿಂದ ಅವರು ದ್ರಾವಿಡನಾಡಿಗೆ ವಿರೋಧವಾಗಿರುವರೆಂದು ವ್ಯಕ್ತವಾಗುವದಿಲ್ಲ ಎಂದರು. ತಮ್ಮ ಭಾಷಣಕ್ಕೆ ರಾಜ್ಯಸಭೆಯಲ್ಲಿ ಸದಸ್ಯರು ಪ್ರತಿಕ್ರಿಯೆ ವ್ಯಕ್ತಪಡಿಸಿದರು, ಏಕೆಂದರೆ ಭಾರತದ ವಿಭಜನೆಯಿಂದ ಆದ ಭಯಂಕರ ಘಟನೆಗಳೇ ಇದಕ್ಕೆ ಕಾರಣ ಎಂದರು. ಆರೀತಿ ಆಗುವದಿಲ್ಲವೆಂದು ತಾವು ಅವರಿಗೆ ಭರವಸೆ ಕೊಟ್ಟಿರುವದಾಗಿಯೂ, ದ್ರಾವಿಡನಾಡು ಆದನಂತರವೂ ದಕ್ಷಿಣ ಹಾಗೂ ಉತ್ತರದಲ್ಲಿ ಸೌಹಾರ್ದತೆ ಇರುವದಾಗಿ ತಾವು ತಿಳಿಸಿದುದಾಗಿಯೂ ಅವರು ಹೇಳಿದರು

ವಿವಿಧ ವಿಷಯಗಳು

ದೂರಪೂರ್ವದ ಪ್ರಮುಖ ಕಾರ್ಯದರ್ಶಿ ಶ್ರೀ ಎನ್ ರೆಡ್ಡಿ ಹೈದರಾಬಾದ ನಿನ್ನೆ ವಾಷಿಂಗ್ಟನ್ನಲ್ಲಿ ಹೇಳಿಕೆಯನ್ನಿತ್ತು, ಚೀನಾ ಜನತಂತ್ರ ರಾಜ್ಯ ನಿಜವಾಗಿಯೂ ಆರ್ಥಿಕ ಮುಗ್ಗಟ್ಟಿನಲ್ಲಿದೆ ಎಂದರು. ಅವರ ಅಹ್ವಾನ ಕಾರ್ಯಕ್ರಮ ಕುಸಿದಿರುವದೇ ಇದಕ್ಕೆ ಕಾರಣವೆಂದು ಅವರು ನುಡಿದರು ಸದ್ಯದಲ್ಲಿಯೇ ಅದು ತೈವಾನ್ ಮೇಲೆ ಆಕ್ರಮಣ ಆರಂಭಿಸುವದಿಲ್ಲವೆಂದು ಅವರು ತಿಳಿಸಿದರು.

ಹೈದರಾಬಾದು ಜಿಲ್ಲೆಯ ಕಾಂಗ್ರೆಸು ಸಮಿತಿ ಸಂಚಾಲಕರಾದ ಕುಮಾರಿ ಕೆ ಕಸ್ತೂರಿ ಬಾಯಿಯವರು, ಅಂತರಜಾತಿ ವಿವಾಹಪ್ರೋತ್ಸಾಹಕ್ಕೆ ಸಮಿತಿಯೊಂದು ರಚನೆ ಆಗಬೇಕಾಗಿದೆ ಇದರಿಂದ ರಾಷ್ಟ್ರೀಯ ಸಂಘಟನೆಗೆ ಸಹಕಾರಿ ಆಗುವುದೆಂದು ಅವರು ನುಡಿದರು

ಮೈಸೂರು – ಮಹಾರಾಷ್ಟ್ರ ಗಡಿ ಪ್ರದೇಶ ಪರಿಹಾರದ ಬಗ್ಗೆ ಭಾರತ ಸರ್ಕಾರದ ಪ್ರವೇಶ ಅತ್ಯಗತ್ಯವಾಗಿದೆ ಎಂದು ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ವೈ. ಬಿ ಚವ್ಹಾಣ್ ನಿನ್ನೆ ಪುಣೆಯಲ್ಲಿ ತಿಳಿಸಿದರು

ಪರ್ಮಿಟ್ ಇಲ್ಲದೆ ಸೋವಿಯೆಟ್ ನಾಯಕ ಶ್ರೀ ಮಧು ಲಿಮಾಯೆ ಈ ವಾರ 10 ರಂದು ಬಾಂಡಾ ಕಡೆಯಿಂದ ಗೋವಾ ಪ್ರವೇಶಿಸುವರು.

ಭಾರತ ಸರ್ಕಾರದ ಮಂತ್ರಿಮಂಡಲಕ್ಕೆ 12 ಮಂದಿಯನ್ನು ನಿನ್ನೆ ಹೊಸದಾಗಿ ಸೇರಿಸಿಕೊಂಡಿದೆ. ಒಟ್ಟು 49 ಮಂದಿ ಆಯಿತು.

ಪಶ್ಚಿಮ ಬಂಗಾಳದಲ್ಲಿ ನಾಲ್ಕು ಸಹಸ್ರ ವರ್ಷಗಳ ಹಿಂದೆಯೇ ಬತ್ತ ಬೆಳೆಯಲ್ಪಡುತ್ತಾಗಿದ್ದಿತೆಂದು ಕಲ್ಕತ್ತಾ ವಾರ್ತೆ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಸ್ತ್ರಜ್ಯೋತಿಷಿಗಳಿಂದ
8 ಪಂಚಮಿ ಅರ್ದ್ರಾ

ಪ್ರಮುಖ ವೃತ್ತಾಂತಗಳು

ಪಾಕಿಸ್ತಾನಕ್ಕೆ ನಾಗಾಗಳು ನುಗ್ಗಿ ಬಂ ತ್ತಿರುವದಾಗಿಯೂ ಈ ವಿಷಯ ದಲ್ಲಿ ಪೂರ್ವ ಪಾಕಿಸ್ತಾನವು ಭಾರತಕ್ಕೆ ಪ್ರತಿಭಟನೆ ಸಲ್ಲಿಸಿರುವದಾಗಿಯೂ ರಾವ ಲ್ಪಿಂಡಿ ವಾರ್ತೆ ತಿಳಿಸುತ್ತದೆ.

ಕೆನಡಾ ತನ್ನ ಡಾಲರು ಮೌಲ್ಯ ಇಳಿಸಿರುವದು ಲಂಡನ್ನಿನಲ್ಲಿ ಗಾಭರಿ ಯುಂಟು ಮಾಡಿದೆ.

ಭಾರತದ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಗೆ ಅವರ ನಿವೃತ್ತಿ ಕಾಲದಲ್ಲಿ ವಿಶೇಷ ಕಾರ್ಯದರ್ಶಿ ಮತ್ತು ವೈದ್ಯಕೀಯ ನೆರವನ್ನು ನೀಡಲು ಯೋಚಿಸಲಾಗಿದೆ. ಅದಕ್ಕಾಗಿ ತಿಂಗಳಿಗೆ ರೂ 1 ಸಾವಿರ ಕೊಡುವಂತೆ ರಾ ಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗಿದೆ ಈಗ ಭಾರತದ ಅಧ್ಯಕ್ಷರಿಗೆ ನಿ ವೃತ್ತಿ ವೇತನ ವರ್ಷಕ್ಕೆ ರೂ. 15 ಸಾವಿರ ಮಾತ್ರವಾಗಿದೆ.

62–63 ನೆಯ ಆಯವ್ಯಯದ ವಿಷಯದ ಮೇಲೆ ಪ್ರಧಾನಿಗಳಿಗೆ ಬೊಂ ಬಾಯಿನ ಭಾರತ ವಾಣಿಜ್ಯ ಸಂಸ್ಥೆಯವರು ಒಂದು ಮನವಿ ಸಲ್ಲಿಸಿ. ಈಗಿನ ತೆರಿ ಗೆಗಳು 3 ನೆಯ ಯೋಜನೆಗಾಗಿ 1100 ಕೋಟಿ ಹೆಚ್ಚಿಗೆ ತೆರಿಗೆ ತರುತ್ತಿದೆಯಾಗಿ ಇನ್ನು ತೆರಿಗೆಗಳನ್ನು ವಿಧಿಸುವುದಿಲ್ಲವೆಂಬ ಭರವಸೆಯನ್ನು ಸರ್ಕಾರ ಕೊಡಬೇ ಕೆಂದು ಪ್ರಾರ್ಥಿಸಿರುವರು.

ಮೈಸೂರು ರಾಜ್ಯದ ಚಲಚ್ಚಿತ್ರ ವಹಿವಾಟು ದಾರರು ರಾಜ್ಯದ ಸಂಕ್ಷಸ್ತರ ಪರಿಹಾರ ನಿಧಿಗೆ ರೂ. 7278 ಕೊಟ್ಟಿರುವರು.

ಭಾರತ ಅಧ್ಯಕ್ಷರು ಸಮ್ಮತಿ ನೀಡಿರುವ ವೈಕೂರು ಭೂಸುಧಾರಣಾ ಶಾಸನ ಶಕ್ತಿಣವೇ ಜಾರಿಗೆ ಬರುವ ಸಂಭವವಿಲ್ಲವೆಂದು ಹೇಳಲಾಗಿದೆ.

ಈ ತಿಂಗಳು ಸುಧ್ಯದಲ್ಲಿ ಪ್ರಧಾನಿ ನೆಹರು ವಿಶ್ರಾಂತಿಗಾಗಿ ಕಾಶ್ಮೀರಕ್ಕೆ ಭೇಟಿಕೊಟ್ಟು ಅಲ್ಲಿ ಸುಮಾರು ದಿನಗಳಿರಬಹುದೆಂದು ವರದಿಯಾಗಿದೆ.

14 ವರ್ಷಗಳ ಹಿಂದಿನ ಕಾಶ್ಮೀರ ವಿಚಾರದ ಸಮಸ್ಯೆಯನ್ನು ಸಹೃದಯ ದಿಂದ ವ್ಯವಸ್ಥೆ ಮಾಡಿಕೊಳ್ಳುವಂತೆ ಭಾರತ ಮತ್ತು ಪಾಕಿಸ್ತಾನಗಳಿಗೆ ಬ್ರಿಟಿಷ್ ಪ್ರತಿನಿಧಿ ಸರ್ ಪ್ಯಾಟ್ರಿಕ್ ಡೀಕ್ ಎಶ್ವಭದ್ರತಾ ಸಮಿತಿಯಲ್ಲಿ ಮನವಿ ಮಾಡಿ ಕೊಂಡಿರುವ.

ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಭಾರತದ ಭಾಗವೆಂದು ರಷ್ಯ ನುಡಿದಿರು ವುದು ಚೀನಾಕ್ಕೆ ಕಳವಳ ಉಂಟಾಗಿದೆ.

ಪಾಕಿಸ್ತಾನ ಅಕ್ರಮಿತ ಕಾಶ್ಮೀರ ಮತ್ತು ಚೀನಾದ ಸಿಕಿಯಾಂಗ ಗಡಿ ವ್ಯವಸ್ಥೆ ಬಗ್ಗೆ ಪಾಕಿಸ್ತಾನ-ಚೀನಾಕ್ಕೆ ಒಪ್ಪಂದವಾಗಿರುವ ವಿಷಯ ಅಮೆರಿಕದಲ್ಲಿ ರಿಗೆ ಆಶ್ಚರ್ಯವುಂಟುಮಾಡಿದೆ.

SHAKTI SUDHA

A Superb Tonic

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಸಿನಿಮಾ ಕ್ಷೇತ್ರ, ಪಾಕಿಸ್ತಾನ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ವಿಶೇಷ ಕನ್ನಡ ಪತ್ರಿಕೆ.

ವುಡ್‌ಲಾಂಡ್ಸ್ ಮುಖಮಾಸ್ಪಿತ 13 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಪ್ರಿಯ 3 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

Help The 'Goraksana'

Advertise in Goraksana and help the pious cause



ಆಕರ್ಷಕ ಕಾರ್ಮಿಕ ವರ್ಗ ಅಭ್ಯುದಯ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.